ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಶುಕ್ರವಾರ, ದಿನಾಂಕ ೭ನೇ ಫೆಬ್ರುವರಿ ೧೯೮೬ ಮಾಘ ೧೮, ೧೯೦೭ ಶಕ.

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೧೧-೦೦ ಗಂಟೆಗೆ ಸಮಾವೇಶಗೊಂಡಿತು.

[ಮಾನ್ಯ ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್)ರವರು ಪೀಠವನ್ನು ಅಲಂಕರಿಸಿದ್ದರು].

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಅಧ್ಯಕ್ಷರು.—ಪ್ರಶ್ನೆ ನಂ. ೨೩೯ (೩೯೯) ಸದಸ್ಯರು ಗೈರು ಹಾಜರಿ.

ಪ್ರಶ್ನೆ ನಂ. ೨೪೦ (೪೮೨), ಪ್ರಶ್ನೆ ನಂ. ೨೪೧ (೫೮೪)

ಪ್ರಶ್ನೆ ನಂ. ೨೪೨ (೬೭೨) ಮತ್ತು ಪ್ರಶ್ನೆ ನಂ. ೨೪೩ (೧೦೧೬) ಈ ಪ್ರಶ್ನೆಗಳನ್ನು ತಡೆಹಿಡಿಯಲಾಗಿದೆ.

ಅಧ್ಯಕ್ಷರು.— ಕಂದಾಯ ಮಂತ್ರಿಗಳ ಪರವಾಗಿ ಯಾರಾದರೂ ಉತ್ತರ ಹೇಳುವ ಹಾಗೆ ಇದ್ದರೆ ಹೇಳಿ.

ಶ್ರೀ ಬಿ. ಆರ್. ಯಾವಗಲ್.—ನಾನು ತಮ್ಮ ಅನುಮತಿಯನ್ನು ಕೋರಿ ಉತ್ತರ ಹೇಳುತ್ತೇನೆ.

ಹೋಬಳಿ ಮಟ್ಟದಲ್ಲಿ ಕೆಲಸ ನಿರ್ವಹಿಸುವ ಬಗ್ಗೆ

ಶ್ರೀ ಜಿ. ರಾಜಶೇಖರಗೌಡ (ಹನೂರು).—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಕಂದಾಯ ಇಲಾಖೆಗೆ ಹೆಚ್ಚಿನ ಕೆಲಸಗಳ ಹೊರೆ ಇರುವುದರಿಂದ ಹೋಬಳಿ ಮಟ್ಟದಲ್ಲೇ ಜನರ ದೈನಂದಿನ ಕೆಲಸ ಕಾರ್ಯಗಳು ಆಗುವಂತಹ ಆಡಳಿತಾತ್ಮಕ ಕೆಲಸವನ್ನು ಮಾಡಲು ಸರ್ಕಾರದವರು ಉದ್ದೇಶಿಸಿರುವರೇ.—

(ಆ) ಹಾಗಿದ್ದಲ್ಲಿ ಇದನ್ನು ಯಾವಾಗ ಕಾರ್ಯಗತಗೊಳಿಸಲಾಗುವುದು ?

ಶ್ರೀ ಬಿ. ಆರ್. ಯಾವಗಲ್ (ಪಂಚಾಯತ್‌ರಾಜ್ ರಾಜ್ಯ ಸಚಿವರು).— ಕಂದಾಯ ಮಂತ್ರಿಗಳ ಪರವಾಗಿ.

(ಅ) ಹೌದು

(ಆ) ಈಗಾಗಲೇ ನಾಡ ಪದ್ಧತಿಯನ್ನು ಸರ್ಕಾರಿ ಆದೇಶ ಸಂಖ್ಯೆ ಆರ್‌ಡಿ ೩೯ ಎಎಸ್‌ಜಿ ೮೦ ದಿನಾಂಕ ೧೦-೯-೧೯೮೧ರಲ್ಲಿ ರಾಜ್ಯದ ನಾಲ್ಕು ವಿಭಾಗಗಳಲ್ಲಿ ಈ ಕೆಳಕಂಡ ಹೋಬಳಿಗಳಲ್ಲಿ ಆಚರಣೆಗೆ ತರಲಾಗಿದೆ.

೧. ಗುಡಿಬಂಡೆ—ಬೆಂಗಳೂರು ವಿಭಾಗ

೨. ಹುಲ್ಲಹಳ್ಳಿ ನಂಜನಗೂಡು ತಾಲ್ಲೂಕು—ಮೈಸೂರು ವಿಭಾಗ

೩. ಚಿಕ್ಕೋಡಿ—ಬೆಳಗಾಂ ವಿಭಾಗ

೪. ಯಾದಗಿರಿ—ಗುಲ್ಬರ್ಗಾ ವಿಭಾಗ

ಹಾಗೂ ಸರ್ಕಾರಿ ಆದೇಶ ಸಂಖ್ಯೆ ಆರ್‌ಡಿ ೨೩೯ ಎಎಸ್‌ಜಿ ೮೦, ದಿನಾಂಕ ೧೧ನೇ ನವೆಂಬರ್ ೧೯೮೨ರಲ್ಲಿ ಗುಲ್ಬರ್ಗಾ ವಿಭಾಗದಲ್ಲಿ ಈ ಕೆಳಗೆ ನಮೂದಿಸಿರುವ ಹೋಬಳಿಗಳಲ್ಲಿ ಸಹ ವಿಸ್ತರಿಸಲಾಗಿದೆ.

೧. ಚಿತ್ತಾಪುರ ತಾಲ್ಲೂಕು—ಕಲಗಿ

೨. ಜೇವರ್ಗಿ ತಾಲ್ಲೂಕು—ಯಡ್ರಾಮಿ

೩. ಶಹಪುರ ತಾಲ್ಲೂಕು—ವಡೇರ

೪. ಚಿತ್ತಾಪುರ ತಾಲ್ಲೂಕು —ಶಹಬಾದ್

೫. ಶೋರಾಪುರ ತಾಲ್ಲೂಕು—ಕೋಡೆಕಾಲ್

ಸದರಿ ಪದ್ಧತಿಯನ್ನು ಇನ್ನೂ ಹೆಚ್ಚಿನ ಹೋಬಳಿಗಳಿಗೆ ವಿಸ್ತರಿಸುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಜಿ. ರಾಜೂಗೌಡ.—ರಾಜ್ಯದ ೯ ಸ್ಥಳಗಳಲ್ಲಿ ನಾಡ ಕಛೇರಿಯನ್ನು ತೆರೆಯುವಾಗ ಯಾವ ಮಾನದಂಡವನ್ನು ಉಪಯೋಗಿಸಿದ್ದೀರಿ ?

ಶ್ರೀ ಬಿ ಆರ್. ಯಾವಗಲ್.—ರಾಜ್ಯದ ಒಂದೊಂದು ರೆವಿನ್ಯೂ ವಿಭಾಗದಲ್ಲಿ ಒಂದೊಂದು ನಾಡ ಕಛೇರಿಯನ್ನು ಪ್ರಯೋಗಾರ್ಥವಾಗಿ ತೆರೆಯಲಾಗಿದೆ. ಇದೇ ಒಂದು ಮಾನದಂಡವನ್ನು ಉಪಯೋಗಿಸಿದ್ದೇವೆ ಬೇರೆ ಯಾವುದೇ ಮಾನದಂಡವನ್ನು ನಾವು ಉಪಯೋಗಿಸಿಲ್ಲ.

ಶ್ರೀ ಜಿ. ರಾಜೂಗೌಡ.—ಯಾವ ತಾಲ್ಲೂಕು ಕೇಂದ್ರಗಳಲ್ಲಿ ಜನಗಳ ಒತ್ತಡವಿದೆ ಯಾವ ತಾಲ್ಲೂಕು ವಿಸ್ತಾರವಾಗಿದೆ ಅಂತಹ ತಾಲ್ಲೂಕುಗಳಲ್ಲಿ ಯಾವುದಾದರೂ ಒಂದು ಹೋಬಳಿ ಮಟ್ಟದಲ್ಲಿ ನಾಡ ಕಛೇರಿಯನ್ನು ತೆರೆಯುವುದನ್ನು ಸರ್ಕಾರದ ಉದ್ದೇಶವಾಗಿದೆ. ಕರ್ನಾಟಕ ರಾಜ್ಯದಲ್ಲಿ ದೊಡ್ಡ ತಾಲ್ಲೂಕು ಆಗಿರತಕ್ಕ ಮೈಸೂರು ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನಲ್ಲಿ ಈಗ ನಮ್ಮ ತಾವೇನು ೯ ಸ್ಥಳಗಳಲ್ಲಿ ನಾಡ ಕಛೇರಿಯನ್ನು ತೆರೆದಿದ್ದೀರಿ ಅದಕ್ಕಿಂತ ಮುಂಚೆ ಕೊಳ್ಳೇಗಾಲ ತಾಲ್ಲೂಕಿನಲ್ಲಿ ತೆರೆಯಬೇಕಾಗಿತ್ತು. ದಯವಿಟ್ಟು ೧೯೮೬-೮೭ನೇ ಸಾಲಿನಲ್ಲಿ ಕೊಳ್ಳೇಗಾಲ ತಾಲ್ಲೂಕಿನಲ್ಲಿ ನಾಡ ಕಛೇರಿಯನ್ನು ತೆರೆಯುವುದಕ್ಕೆ ವ್ಯವಸ್ಥೆಯನ್ನು ಮಾಡುತ್ತೀರಾ ?

ಶ್ರೀ ಬಿ. ಆರ್. ಯಾವಗಲ್.—ರಾಜ್ಯದಲ್ಲಿ ೭೭೬ ಸರ್ಕಲ್‌ಗಳಿವೆ, ಎಲ್ಲಾ ಕಡೆಗಳಲ್ಲಿಯೂ ನಾಡ ಕಛೇರಿಯನ್ನು ತೆರೆಯಬೇಕಾಗಿದೆ. ಹಂತ ಹಂತವಾಗಿ ನಾಡ ಕಛೇರಿಗಳನ್ನು ತೆರೆಯಲಾಗುವುದು. ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಅಲ್ಲಿ ಅವಶ್ಯವಿದ್ದರೆ ಬರುವ ವರ್ಷದಲ್ಲಿ ನಾಡ ಕಛೇರಿಯನ್ನು ತೆರೆಯಲಿಕ್ಕೆ ಪ್ರಯತ್ನ ಮಾಡಲಾಗುತ್ತದೆ.

ಶ್ರೀ ಜಿ. ರಾಜೂಗೌಡ.—ಇಡೀ ರಾಜ್ಯದಲ್ಲಿ ದೊಡ್ಡ ತಾಲ್ಲೂಕು ಎಂದರೆ ಕೊಳ್ಳೇಗಾಲ ತಾಲ್ಲೂಕು. ತಾಲ್ಲೂಕು ಕೇಂದ್ರದಿಂದ ಒಂದು ಹೋಬಳಿಗೆ ೭೦ ಕಿಲೋಮೀಟರ್ ದೂರವಿದೆ. ದಿನನಿತ್ಯ ಜನರು ಓಡಾಡಿ ತಮ್ಮ ಕೆಲಸ ಮಾಡಿಸಿಕೊಳ್ಳುವುದು ಬಹಳ ಕಷ್ಟವಾಗಿದೆ. ಆದ್ದರಿಂದ ದಯವಿಟ್ಟು ಈ ವರ್ಷದಲ್ಲಿಯೇ ಕೊಳ್ಳೇಗಾಲ ತಾಲ್ಲೂಕಿನ ಯಾವುದಾದರೂ ಒಂದು ಹೋಬಳಿಯಲ್ಲಿ ನಾಡ ಕಛೇರಿಯನ್ನು ತೆರೆಯುವ ಬಗ್ಗೆ ಮಾನ್ಯ ಮಂತ್ರಿಗಳು ಆಶ್ವಾಸನೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.